# ರೈಕ್ವನ ಕಥೆ

## (ಛಾಂದೋಗ್ಯೋಪನಿಷತ್ತು)

ಸ್ವಾಮಿ ವೀರೇಶಾನಂದ

**ಜಾ**ನಶ್ರುತಿ ಎಂಬ ರಾಜನಿದ್ದನು. ಅವನು ಜನಶ್ರುತನ ಮಗನು. ಅವನು ಪೌತ್ರಾಯಣನು ಕೂಡ. ಅಂದರೆ ಅವನು ಪುತ್ರನೆಂಬುವವನ ಮೊಮ್ಮಗನು. ಅವನು ಶ್ರದ್ಧಾವಂತನು. ಬ್ರಾಹ್ಮಣರಿಗೆ ಯಾವ ಉಪಚಾರವನ್ನು ಮಾಡಬೇಕೋ, ಅದನ್ನು ಬಹಳ ಶ್ರದ್ಧೆಯಿಂದ ಮಾಡುತ್ತಿದ್ದನು. ಅದಕ್ಕೆಂದೇ ಅವನನ್ನು 'ಶ್ರದ್ಧಾದೇಯ' ಎಂದು ಉಪನಿಷತ್ತು ಕರೆಯುತ್ತದೆ. ಇದಲ್ಲದೆ ಅವನು ಬಹಳ ಹೆಚ್ಚಿನ ಪ್ರಮಾಣದಲ್ಲಿ ದಾನ ಮಾಡುವ ಗುಣ ವನ್ನು ಹೊಂದಿದ್ದನು. ಅವನ ಅರಮನೆಯಲ್ಲಿ ದಿನವೂ ಬಹು ವಾಗಿ ಅಡುಗೆ ನಡೆಯುತ್ತಿತ್ತು. ನೂರಾರು ಜನರಿಗೆ ಸಾಲುವ ಅನ್ನವು ತಯಾರಾಗುತ್ತಿತ್ತು. ಇದಲ್ಲದೆ ಜಾನಶ್ರುತಿಯು ಇನ್ನೊಂದು ದೊಡ್ಡ ಕಾರ್ಯವನ್ನು ಕೈಗೊಂಡಿದ್ದನು. ದಶದಿಕ್ಕುಗಳಲ್ಲಿಯೂ ಅವನು ತನ್ನ ರಾಜ್ಯದ ನಗರಗಳು, ಗ್ರಾಮಗಳಲ್ಲಿ ಅನ್ನಛತ್ರಗಳನ್ನು ನಿರ್ಮಿಸಿದ್ದನು. ''ಎಲ್ಲ ಕಡೆಗಳಿಂದಲೂ ಜನರು ಬರಲಿ. ನಾನು ದಾನ ಮಾಡುವ ಅನ್ನವನ್ನು ಎಲ್ಲರೂ ಭುಂಜಿಸಲಿ. ನನ್ನನ್ನು ಹರಸಲಿ'' — ಈ ಅಭಿಪ್ರಾಯದಿಂದ ಈ ಅನ್ನಛತ್ರಗಳನ್ನು ಕಟ್ಟಿಸಿದ್ದನು.

ಹೀಗಿರಲು, ಒಂದು ದಿನ ಕೆಲವು ಹಂಸಗಳು ರಾತ್ರಿಯ ಸಮಯದಲ್ಲಿ ಹಾರಿಹೋಗುತ್ತಿದ್ದವು. ಋಷಿಗಳೋ ಅಥವಾ ದೇವತೆಗಳೋ ರಾಜನ ದಾನಗುಣದಿಂದ ತುಷ್ಟರಾಗಿ, ಹಂಸರೂಪ ದಿಂದ ರಾಜನಿಗೆ ಕಾಣುತ್ತಿದ್ದವು. ಆಗ ಒಂದು ಹಂಸವು ಮುಂದೆ ಹಾರಿಹೋಗುತ್ತಿದ್ದ ಹಂಸವನ್ನು ಕುರಿತು ಹೀಗೆಂದಿತು: ''ಹೇ ಭಲ್ಲಾಕ್ಷ, ಹೇ ಭಲ್ಲಾಕ್ಷ.'' ಈ ಭಲ್ಲಾಕ್ಷ ಎಂದರೆ ಏನು? 'ಸರಿಯಾಗಿ ಕಣ್ಣುಕಾಣುವುದಿಲ್ಲವೆ?' ಎಂದು ಹಂಗಿಸುವುದಕ್ಕೆ ಎಂದು ಅರ್ಥ ಹೇಳಬಹುದು. ಇದು ಒಂದು ರೀತಿಯ ಅಸಹನೆಯ ಪದ ವಾಗಿದೆ. ಆ ಹಂಸವು ಮುಂದುವರೆದು ಹೇಳಿತು, ''ಜಾನಶ್ರುತಿ ಪೌತ್ರಾಯಣನು ಬಹುವಾಗಿ ಅನ್ನದಾನವನ್ನು ಮಾಡಿದ್ದಾನೆ. ಇದರ ಪ್ರಭಾವದಿಂದ ಬೆಳಗುವ ಜ್ಯೋತಿಯು ಸ್ವರ್ಗಲೋಕದ ತನಕವೂ ಸಮನಾಗಿ ಹರಡಿಕೊಂಡಿದೆ. ಸ್ವರ್ಗಲೋಕವನ್ನು ಮುಟ್ಟುತ್ತಿದೆ. ರಾತ್ರಿಯಲ್ಲಿಯೂ ಹಗಲಿನ ಬೆಳಕಿಗೆ ಸಮಾನವಾದ ಜ್ಯೋತಿಯು ಹರಡಿರುವುದನ್ನು ನೀನು ನೋಡುತ್ತಿಲ್ಲವೇನು? ಅದನ್ನು ಸೋಂಕಬೇಡ. ಅದನ್ನು ನೀನು ಮುಟ್ಟಿದರೆ ಆ ಜ್ಯೋತಿಯು ನಿನ್ನನ್ನು ಸುಟ್ಟುಹಾಕಬಹುದು. ಎಚ್ಚರ! ಎಚ್ಚರ! ''

ಈ ಹಂಸವನ್ನು ಕುರಿತು ಮತ್ತೊಂದು ಹಂಸವು ಹೀಗೆಂದಿತು: ''ಎಲವೋ, ನೀನು ಏನು ತಾನೇ ಹೇಳು. ಇವನು ಸಯುಗ್ವ (ಬಂಡಿಯಿಂದ ಕೂಡಿದ) ರೈಕ್ವನಷ್ಟು ಶ್ರೇಷ್ಠನಲ್ಲ. ಈ ರಾಜನು



ಒಬ್ಬ ಕೀಳು ಮನುಷ್ಯ; ಸಣ್ಣ ಮನುಷ್ಯ. ಇವನಲ್ಲಿ ಎಂಥ ಮಹಿಮೆ ಯಾದರೂ ಇದೆ?'' ತಿರಸ್ಕಾರದ ಈ ಮಾತುಗಳನ್ನು ಕೇಳಿದ ಮೊದಲನೆಯ ಹಂಸವು ಕೇಳಿತು: ''ಅಯ್ಯಾ, ಬಂಡಿಯೊಡನೆ ಇರುವ ರೈಕ್ವನೆಂಬುವವನು ಯಾರು? ಅವನು ಹೇಗಿರುತ್ತಾನೆ?''

ಆಗ ಎರಡನೆಯ ಹಂಸವು ರೈಕ್ವನ ಮಹಿಮೆಯನ್ನು ಹೇಳಲು ಆರಂಭಿಸುತ್ತದೆ: ''ಅಯ್ಯಾ, ಪಗಡೆಯಲ್ಲಿ ದಾಳವನ್ನು ಹಾಕಿದರೆ, ನಾಲ್ಕು ಸಂಖ್ಯೆ ಬರುವುದು ಎಂದುಕೋ. (ಅದನ್ನು 'ಕೃತ' ಎನ್ನು ತ್ತಾರೆ. ಹಾಗೆಯೇ ೩ನೇ ಸಂಖ್ಯೆಗೆ 'ತ್ರೇತಾ' ಎಂದೂ, ೨ನೇ ಸಂಖ್ಯೆಗೆ 'ದ್ವಾಪರ' ಎಂದೂ, ೧ನೇ ಸಂಖ್ಯೆಗೆ 'ಕಲಿ' ಎಂದೂ ಆ ಕಾಲದಲ್ಲಿ ಕರೆಯುತ್ತಿದ್ದರು.) ಈ ಕೃತವನ್ನು (೪ನೆಯ ಸಂಖ್ಯೆ ಯನ್ನು) ಗೆದ್ದುಕೊಂಡರೆ, ಕೆಳಗಿರುವುದೆಲ್ಲವೂ ಬಂದು ಸೇರುತ್ತವೆ (ಅಂದರೆ, ೧, ೨, ೩, ಸಂಖ್ಯೆಗಳೆಲ್ಲವೂ ೪ ಸಂಖ್ಯೆಯಲ್ಲಿ ಬಂದು ಸೇರುತ್ತವೆ). ಹಾಗೆಯೇ ಜನರು ಏನೇನು ಒಳ್ಳೆಯದನ್ನು ಮಾಡು ತ್ತಾರೋ, ಅವೆಲ್ಲವೂ ಯಾರು ಬ್ರಹ್ಮಜ್ಞಾನವನ್ನು ಪಡೆದು ಕೊಂಡಿರುತ್ತಾರೋ, ಅವರಲ್ಲಿ ಅಡಕವಾಗಿರುತ್ತವೆ. ರೈಕ್ವನು ಅಂಥ ಬ್ರಹ್ಮಜ್ಞಾನಿಯಾಗಿದ್ದಾನೆ. ಅವನು ಸಿದ್ಧಿಸಿಕೊಂಡಿರುವ ಧರ್ಮ ದಲ್ಲಿ (ಬ್ರಹ್ಮಜ್ಞಾನವು ಎಲ್ಲ ಧರ್ಮಗಳ ಚರಮಸ್ಥಾನವಾಗಿದೆ) ಸರ್ವಪ್ರಾಣಿಗಳ ಸಾಧಾರಣ ಧರ್ಮಫಲಗಳೂ ಸೇರಿಕೊಂಡಿರು ತ್ತವೆ. ಅಯ್ಯಾ ಹಂಸವೇ, ಈ ರೈಕ್ವನಂತೆ ಮತ್ತೊಬ್ಬ ಯಾವನೇ ಆಗಲಿ, ಅವನೂ ಕೂಡ ರೈಕ್ವನಂತೆಯೇ ಕೃತ ದಾಳದಂತೆ ಆಗಿ ಬಿಡುತ್ತಾನೆ. ಎಲ್ಲರಿಂದಲೂ ತಿಳಿಯಬೇಕಾದ ಬ್ರಹ್ಮಜ್ಞಾನವನ್ನು ತಿಳಿದುಕೊಂಡರೆ, ಅವನನ್ನು ಸರ್ವಜೀವಿಗಳ ಧರ್ಮಫಲಗಳೂ ಬಂದುಸೇರುತ್ತವೆ.''

ಹಂಸಗಳ ಈ ಸಂಭಾಷಣೆಯನ್ನು ರಾತ್ರಿಯ ಸಮಯದಲ್ಲಿ ಉಪ್ಪರಿಗೆಯ ಮೇಲುಗಡೆ ಮಲಗಿದ್ದ ಜಾನಶ್ರುತಿಯು ಕೇಳಿಸಿ

ಕೊಂಡನು. ಹಂಸಗಳ ಈ ಮಾತನ್ನೇ ನೆನೆಸಿಕೊಂಡು, ನೆನೆಸಿಕೊಂಡು ಅವನ ಮನಸ್ಸಿಗೆ ಬಹಳ ದುಃಖವಾಯಿತು. ಇದುವರೆಗೂ ತಾನೇ ಬಹಳ ದೊಡ್ಡ ವ್ಯಕ್ತಿಯೆಂದೂ, ಕೀರ್ತಿವಂತನೆಂದೂ ಅವನು ತಿಳಿದುಕೊಂಡಿದ್ದನು. ಹಂಸಗಳು ಅವನನ್ನು ತಿರಸ್ಕರಿಸಿದ್ದು ಅವನಿಗೆ ಖಂಡಿತವಾಗಿಯೂ ಬೇಸರವನ್ನು ಉಂಟುಮಾಡಿತ್ತು. ಹಂಸಗಳ ಮಾತುಗಳನ್ನೇ ಮತ್ತೆ ಮತ್ತೆ ನೆನಪಿಗೆ ತಂದುಕೊಳ್ಳುತ್ತ ಅವನು ರಾತ್ರಿಯನ್ನೆಲ್ಲ ಕಳೆದನು.

ಬೆಳಗಾಯಿತು. ವಂದಿಮಾಗಧರು ರಾಜನನ್ನು ಮಧುರವಾದ ನುಡಿಗಳಿಂದ ಸ್ತುತಿಮಾಡಿದರು. ಅವರ ಸ್ತುತಿಯನ್ನು ಕೇಳುತ್ತಲೇ ರಾಜನು ಕಣ್ಣುತೆರೆದನು. ಎದ್ದೊಡನೆಯೇ, ತನ್ನ ಸಾರಥಿಯನ್ನು ಕರೆಸಿದನು. ಅವನಿಗೆ ಹೀಗೆ ಆಜ್ಞೆ ಮಾಡಿದನು: ''ಅಯ್ಯಾ, ನಮ್ಮ ರಾಜ್ಯದಲ್ಲಿ ಬಂಡಿಯ ರೈಕ್ವನೆಂಬುವವನು ಇದ್ದಾನೆಯೆ? ಅವನ ಸಿದ್ಧಿಯು ನನ್ನ ಯಶಸ್ಸಿಗಿಂತ ಎಷ್ಟೋ ಮಿಗಿಲಾದುದಂತೆ. ಹೀಗಿರುವಾಗ, ನಿಮ್ಮ ಹೊಗಳಿಕೆಗಳಿಂದ ನನಗೆ ಏನು ತಾನೇ ಪ್ರಯೋಜನ? ನಾನು ಕೂಡ ರೈಕ್ವನಂತೆ ಪರಿಪೂರ್ಣ ಸಿದ್ಧಿಯುಳ್ಳವನಾಗಲೇಬೇಕು. ಅವನದೇನು ಹೆಗ್ಗಳಿಕೆ? ಅವನು ಎಲ್ಲಿದ್ದಾನೆ, ಹೇಗೆ ಇದ್ದಾನೆ? ನನ್ನ ರಾಜ್ಯವನ್ನೆಲ್ಲ ಹುಡುಕಿರಿ. ರೈಕ್ವನ ಶ್ರೇಷ್ಠತನದ ಬಗ್ಗೆ ತಿಳಿಯಿರಿ. ''

ಜಾನಶ್ರುತಿಯ ಸಾರಥಿಯು ರಾಜ್ಯದ ಎಲ್ಲ ನಗರಗಳಿಗೆ, ಗ್ರಾಮಗಳಿಗೆ ಹೋದನು. ರೈಕ್ವನನ್ನು ಹುಡುಕಿದನು. ಅವನು ಎಲ್ಲಿಯೂ ಕಾಣಬರಲಿಲ್ಲ. ಮರಳಿಬಂದು ತನ್ನ ರಾಜನಿಗೆ ಹೇಳಿದನು. ರಾಜನಿಗೆ ಇದರಿಂದ ತೃಪ್ತನಾಗಲಿಲ್ಲ. ''ಅಯ್ಯಾ, ಎಲ್ಲಿ ಬ್ರಹ್ಮಜ್ಞಾನಿಯನ್ನು ಹುಡುಕಬೇಕೋ, ಅಲ್ಲಿ ತಾನೇ ನೀನು ಹುಡುಕಬೇಕು! ಹೋಗು, ಸರಿಯಾಗಿ ಹುಡುಕಿನೋಡು'' ಎಂದು ತನ್ನ ಸಾರಥಿಯನ್ನು ಮತ್ತೊಮ್ಮೆ ಕಳಿಸಿಬಿಟ್ಟನು.

ಸಾರಥಿಯು ಮತ್ತೊಮ್ಮೆ ಹುಡುಕಲು ಆರಂಭಿಸಿದನು. ಒಂದು ಕಡೆ ಒಂದು ಬಂಡಿಯನ್ನು ನೋಡಿದನು. ಅದರ ಕೆಳಗೆ ಒಬ್ಬ ಕುರೂಪಿ ಮನುಷ್ಯನು ಕುಳಿತುಕೊಂಡಿದ್ದನು. ಅವನ ಮೈಯೆಲ್ಲ ಕಜ್ಜಿಯಾಗಿತ್ತು. ಆ ಮನುಷ್ಯನು ಕಜ್ಜಿಯನ್ನು ತುರಿಸಿಕೊಳ್ಳುತ್ತ ಕುಳಿತಿದ್ದನು. ಬಂಡಿಕಾರ ರೈಕ್ವನೆಂದರೆ ಇವನೇ ಇರಬೇಕು ಎಂದುಕೊಂಡ ಅವನು, ಅವನ ಬಳಿಗೆ ಹೋಗಿ, ವಿನಯದಿಂದ ಕುಳಿತುಕೊಂಡನು. ''ಎಲೈ ಪೂಜ್ಯನೇ, ಬಂಡಿಕಾರ ರೈಕ್ವನೆಂದರೆ ನೀನೇ ಏನು?'' ಎಂದು ವಿನಯದಿಂದ ಕೇಳಿದನು. ಆ ಮುದುಕನಾದರೋ, ''ಹೌದೋ, ನಾನೇ ಕಣೋ'' ಎಂದು ತಿರಸ್ಕಾರ ಭಾವನೆಯಿಂದಲೇ ಉತ್ತರಕೊಟ್ಟನು. ಸಾರಥಿಯು ತಲೆಯಾಡಿಸುತ್ತ, ''ತಿಳಿಯಿತು, ಗೊತ್ತಾಯಿತು'' ಎಂದು ಹೇಳಿ ರಾಜನ ಹತ್ತಿರ ಮರಳಿಬಂದನು.

ಜಾನಶ್ರುತಿಯು ರಾಜನಾದರೂ ಆಧ್ಯಾತ್ಮಿಕ ಪಿಪಾಸುವಾಗಿದ್ದನು. ಬ್ರಹ್ಮಜ್ಞಾನಿಯಾದ ರೈಕ್ವನ ಮನಸ್ಸನ್ನು ಗೆಲ್ಲಲೇಬೇಕು ಎಂದು ಮನಸ್ಸು ಮಾಡಿದನು. ರೈಕ್ವನಿಗೆ ಕೊಡುಗೆಯಾಗಿ ಕೊಡಲು ಆರುನೂರು ಗೋವುಗಳು, ಬೆಲೆಬಾಳುವ ಒಂದು ಕಂಠೀಹಾರ ಮತ್ತು ಹೇಸರಕತ್ತೆಗಳನ್ನು ಕಟ್ಟಿದ್ದ ಒಂದು ಭವ್ಯವಾದ ರಥ — ಇಷ್ಟೆಲ್ಲ ಧನಸಂಪತ್ತುಗಳನ್ನು ತೆಗೆದುಕೊಂಡು ರೈಕ್ವನ ಬಳಿಗೆ ಹೋದನು.

ಯಾರಿಗಾದರೂ ಅಸಹ್ಯ ಬರುವಂತೆ ರೈಕ್ವನು ಇದ್ದನು. ವೃದ್ಧ ಶರೀರ, ಗಾಡಿಯೊಂದರ ಕೆಳಗೆ ಅವನ ವಾಸ. ಅಷ್ಟೇ ಅಲ್ಲ, ಮೈತುಂಬ ಕಜ್ಜಿ. ಅದನ್ನು ಯಾವಾಗಲೂ ತುರಿಸಿಕೊಳ್ಳುತ್ತಿದ್ದ ಅವನು ಸಾಧಾರಣ ಜನರಿಗೆ ಭಯಂಕರವಾಗಿ ಕಾಣುತ್ತಿದ್ದನು. ಇಷ್ಟಾದರೂ ಮಹಾಜ್ಞಾನಿಯಾಗಿದ್ದ ಅವನಲ್ಲಿದ್ದ ವಿದ್ಯೆಯ ಮಹತ್ವವನ್ನು ರಾಜನಾದ ಜಾನಶ್ರುತಿಯು ಅರಿತಿದ್ದನು. ಹಾಗೆಂದೇ ರೈಕ್ವನಿಗೆ ಹೀಗೆ ಹೇಳಿದನು: ''ರೈಕ್ವನೇ, ಇದೋ ಆರುನೂರು ಗೋವುಗಳನ್ನು, ಒಂದು ಕಂಠೀಹಾರವನ್ನು, ಹೇಸರಗತ್ತೆಗಳನ್ನು ಕಟ್ಟಿದ ಭವ್ಯವಾದ ರಥವನ್ನು ನಿನಗೆ ವಿನಯದಿಂದ ಕೊಡುತ್ತಿದ್ದೇನೆ. ದಯವಿಟ್ಟು, ಯಾವ ಮಹಾನ್ ದೇವತೆಯನ್ನು ಕುರಿತು ನೀನು ಉಪಾಸನೆಯನ್ನು ಮಾಡುತ್ತಿರುವೆಯೋ, ಆ ದೇವತೆಯ ಬಗ್ಗೆ ನನಗೆ ಹೇಳಿಕೊಡು. ಈ ಬಗ್ಗೆ ನನಗೆ ಉಪದೇಶ ಮಾಡು.''

ಆದರೆ ರೈಕ್ವನು ಸಂತೋಷಗೊಳ್ಳುವುದರ ಬದಲಾಗಿ, ವಿಪರೀತ ಕೋಪಗೊಂಡನು. ''ಎಲವೋ ನೀಚನೇ, ನಿನ್ನ ಹಾರ, ಗೋವು, ರಥ – ಎಲ್ಲವನ್ನೂ ತೆಗೆದುಕೊಂಡು ಹೊರಡು. ಅವು ನಿನ್ನಲ್ಲಿಯೇ ಇರಲಿ. ಇವುಗಳಿಂದ ನನಗೆ ಯಾವ ಪ್ರಯೋಜನವೂ ಇಲ್ಲ.''

ರೈಕ್ವನ ಮಾತನ್ನು ಕೇಳಿ, ಜಾನಶ್ರುತಿಯು ಅಧೀರನಾಗಲಿಲ್ಲ. ರೈಕ್ವನ ಅಭಿಪ್ರಾಯವನ್ನು ತಿಳಿದುಕೊಂಡ ಅವನು ಅರಮನೆಗೆ ಬಂದನು. ತಾನು ಹಿಂದೆ ತೆಗೆದುಕೊಂಡು ಹೋಗಿದ್ದ ವಸ್ತುಗಳೆಲ್ಲವನ್ನೂ ಮತ್ತೆ ತೆಗೆದುಕೊಂಡು ಹೋದನು. ಅವುಗಳೊಂದಿಗೆ, ತನ್ನ ಮಗಳನ್ನೂ ಕರೆದುಕೊಂಡು ಹೋದನು. ಬ್ರಹ್ಮವಿದ್ಯೆಗಾಗಿ ತನ್ನ ಮಗಳನ್ನು ರೈಕ್ವನಿಗೆ ಮದುವೆಮಾಡಿ ಕೊಡುವುದಕ್ಕೂ ಅವನು ಸಿದ್ಧನಾಗಿದ್ದನು. ಮತ್ತೊಮ್ಮೆ ರೈಕ್ವನೆಡೆಗೆ ಬಂದು ವಿನಯಪೂರ್ವಕವಾಗಿ ನಿಂದು, ಹೀಗೆ ಕೇಳಿಕೊಂಡನು: ''ಓ ರೈಕ್ವನೇ, ಇದೋ ಈ ಸಹಸ್ರ ಗೋವುಗಳು, ಈ ಕಂಠೀಹಾರ, ಈ ರಥ. ಇದಲ್ಲದೆ ನನ್ನ ಮಗಳನ್ನು ಕೂಡ ನಿನಗೆ ಕೊಡುತ್ತಿದ್ದೇನೆ. ಇವಳು ಇನ್ನುಮೇಲೆ ನಿನ್ನ ಪತ್ನಿ. ಇದಲ್ಲದೆ, ಓ ರೈಕ್ವನೇ, ಈ ಗ್ರಾಮವನ್ನೂ ನಿನಗೇ ಬರೆದುಕೊಡುತ್ತೇನೆ. ದಯವಿಟ್ಟು ನನಗೆ ಉಪದೇಶ ಮಾಡು. ಯಾವ ದೇವತೆಯನ್ನು ನೀನು ಉಪಾಸನೆ ಮಾಡುತ್ತಿರುವೆಯೋ, ಅದನ್ನು ದಯವಿಟ್ಟು ನನಗೂ ಹೇಳಿಕೊಡು.''

ರೈಕ್ವನು ಈಗ ಪ್ರಸನ್ನನಾದನು. ಜಾನಶ್ರುತಿಯ ಮಗಳನ್ನೇ ದಿಟ್ಟಿಸಿ ನೋಡಿದನು. ಆದರೆ ಈ ಬಾರಿಯೂ ಜಾನಶ್ರುತಿಯನ್ನು ನೀಚನೆಂದೇ ಕರೆದನು. ಆದರೆ ''ಓ ನೀಚನೇ, ಒಳ್ಳೆಯದು.

ವಿದ್ಯೆಯನ್ನು ಕಲಿಯಬೇಕೆಂದು ಇಷ್ಟೆಲ್ಲ ತಂದ್ದೀಯೆ. ಸರಿ, ಸರಿ'' ಎಂದು ಒಪ್ಪಿಗೆಯನ್ನು ಸೂಚಿಸಿದನು.

ಜಾನಶ್ರುತಿಯು ರೈಕ್ವನಿಗೆ ಒಂದು ಗ್ರಾಮವನ್ನಷ್ಟೇ ಅಲ್ಲ, ಹಲವಾರು ಗ್ರಾಮಗಳನ್ನು ನೀಡಿದನು ಎಂದು ಕಾಣುತ್ತದೆ. ಆ ಗ್ರಾಮಗಳು ರೈಕ್ವಪರ್ಣಗಳೆಂದೇ ಪ್ರಸಿದ್ಧವಾಗಿವೆ ಎಂದು ಈ ಉಪನಿಷತ್ತಿನ ಭಾಷ್ಯಕಾರರಾದ ಶಂಕರಾಚಾರ್ಯರು ಬರೆದಿದ್ದಾರೆ. ಏನೇ ಇರಲಿ, ಈ ಕೊಡುಗೆಗಳನ್ನು ಸ್ವೀಕರಿಸಿದ ರೈಕ್ವನು ರಾಜನಿಗೆ **ಸಂವರ್ಗವಿದ್ಯೆ** ಎಂದು ಪ್ರಖ್ಯಾತವಾದ ಉಪಾಸನಾ ವಿಧಾನವನ್ನು ಹೇಳಿಕೊಟ್ಟನು.

ಈ ಸಂವರ್ಗವಿದ್ಯೆಯನ್ನು ಸಂಕ್ಷಿಪ್ತವಾಗಿ ಹೀಗೆ ವಿವರಿಸಬಹುದು: ಅಧಿದೈವತಾ ದೃಷ್ಟಿಯಿಂದ ನೋಡುವುದಾದರೆ, ವಾಯುವೇ ಸಂವರ್ಗ - ಎಲ್ಲ ತತ್ತ್ವಗಳು ವಿಲೀನವಾಗುವ ಮಹಾನ್ ತತ್ತ್ವ. ಏಕೆಂದರೆ ಪ್ರಲಯಕಾಲದಲ್ಲಿ ಅಗ್ನಿ, ಸೂರ್ಯ, ಚಂದ್ರ, ಜಲ - ಇವೆಲ್ಲವೂ ವಾಯುವಿನಲ್ಲಿಯೇ ವಿಲೀನವಾಗುತ್ತವೆ. ಅಧ್ಯಾತ್ಮ (ದೇಹದ) ದೃಷ್ಟಿಯಿಂದ ನೋಡುವುದಾದರೆ, ಪ್ರಾಣವೇ ಸಂವರ್ಗ. ಏಕೆಂದರೆ, ಸುಷುಪ್ತಿಯಲ್ಲಿ ವಾಕ್ಕು, ಚಕ್ಷುರಿಂದ್ರಿಯ, ಶ್ರೋತ್ರೇಂದ್ರಿಯ, ಮನಸ್ಸು — ಎಲ್ಲವೂ ಪ್ರಾಣದಲ್ಲಿಯೇ ವಿಲೀನವಾಗುತ್ತವೆ. ಹೀಗಾಗಿ ವಾಯು ಮತ್ತು ಪ್ರಾಣಗಳನ್ನು ಸಂವರ್ಗವೆಂದೇ ಉಪಾಸನೆ ಮಾಡಬೇಕು.

# ಉಪಕೋಸಲ

ಇಲ್ಲಿಯವರೆಗೆ ಸತ್ಯಕಾಮನ ಕಥೆಯನ್ನು ನೋಡಿದೆವು. ಈಗ ಸತ್ಯಕಾಮನು ಆಚಾರ್ಯನಾಗಿಬಿಟ್ಟಿದ್ದಾನೆ. ಅವನ ಆಶ್ರಮದಲ್ಲಿ ಹಲವಾರು ಬ್ರಹ್ಮಚಾರಿಗಳು ವಿದ್ಯಾಭ್ಯಾಸ ಮಾಡುತ್ತಿದ್ದರು. ಅವರಲ್ಲಿ ಉಪಕೋಸಲ ಕಾಮಲಾಯನನೂ ಒಬ್ಬನು. ಆಚಾರ್ಯನು ಅವನಿಗೆ ಮನೆಯಲ್ಲಿ ಇರುವ ಅಗ್ನಿಗಳನ್ನು ಕಾಪಾಡಿಕೊಂಡು ಬರುವ ಕರ್ತವ್ಯವನ್ನು ನೀಡಿದ್ದನು. ಅದರಂತೆಯೇ ಬಾಲಕನಾದ ಉಪಕೋಸಲನು ಹನ್ನೆರಡು ವರ್ಷಗಳ ಕಾಲ ಅಗ್ನಿಗಳನ್ನು ಪರಿಚರ್ಯೆ ಮಾಡಿದನು. ಆದರೆ ಇಂದು ಅವನು ದುಃಖತಪ್ತನಾಗಿದ್ದಾನೆ. ಅವನ ಮನಸ್ಸು ಹತಾಶವಾಗಿತ್ತು. ಇದಕ್ಕೆ ಕಾರಣವೂ ಇತ್ತು. ಆಚಾರ್ಯನಾದ ಸತ್ಯಕಾಮನು ಮಿಕ್ಕ ಶಿಷ್ಯರಿಗೆಲ್ಲ ಈಗಾಗಲೇ ವಿದ್ಯಾಭ್ಯಾಸ ಮಾಡಿಸಿ, ಸಮಾವರ್ತನ (ಹಿಂದಿರುಗಿ ಕಳಿಸಿಕೊಡುವುದು) ಮಾಡಿಸಿದ್ದನು. ಆದರೆ ಸತ್ಯಕಾಮನು ಹನ್ನೆರಡು ವರ್ಷಗಳ ನಂತರವೂ ಉಪಕೋಸಲನನ್ನು ತನ್ನ ಮನೆಯಲ್ಲಿಯೇ ಉಳಿಸಿಕೊಂಡಿದ್ದನು. ಅವನಿಗೆ ವಿದ್ಯಾಭ್ಯಾಸ ಮಾಡಿಸಿರಲಿಲ್ಲ.

ಸತ್ಯಕಾಮನ ಹೆಂಡತಿಗೆ ಉಪಕೋಸಲನ ಮೇಲೆ ಅತೀವ ಪ್ರೀತಿ. ಉಪಕೋಸಲನ ಶ್ರದ್ಧೆ, ಸೇವಾತತ್ಪರತೆಗಳನ್ನು ಕಂಡು ಅವಳಿಗೆ ತುಂಬ ಸಂತೋಷವಾಗಿತ್ತು. ಆದರೆ ಇಂದು ಹುಡುಗನು ಬೇಸರಗೊಂಡಿರುವುದನ್ನು ಕಂಡು, ಗುರುಪತ್ನಿಯಾದ ಅವಳ ಮನಸ್ಸಿಗೆ ತುಂಬ ನೋವುಂಟಾಯಿತು. ಇದಕ್ಕೆ ಕಾರಣವೂ ಅವಳಿಗೆ ಗೊತ್ತಿತ್ತು. ಹಾಗೆಂದೇ ಅವಳು ತನ್ನ ಪತಿದೇವನನ್ನು ಸಮೀಪಿಸಿ, ಹೀಗೆಂದಳು: ''ಉಪಕೋಸಲನು ಬಹಳ ಪರಿಶ್ರಮಪಟ್ಟು ಅಗ್ನಿಗಳ ಸೇವೆಯನ್ನು ಮಾಡಿಕೊಂಡು ಬಂದಿದ್ದಾನೆ. ಆದರೆ ಅವನಿಗೆ ನೀವು ಇನ್ನೂ ವಿದ್ಯೆಯನ್ನು ಹೇಳಿಕೊಟ್ಟಿಲ್ಲ. ಹೀಗಾಗಿ ಮನಸ್ಸಿನಲ್ಲಿ ತುಂಬ ಸಂತಪ್ತನಾಗಿದ್ದಾನೆ. ಅಗ್ನಿಗಳ ಸೇವೆಯನ್ನು ಮಾಡುವುದರಲ್ಲಿ ಇವನು ಬಹಳ ಕುಶಲ. ನೀವು ಈ ಹುಡುಗನನ್ನು ಈ ರೀತಿ ಕಡೆಗಣಿಸಿದರೆ, ಅವನು ಉಪಾಸನೆ ಮಾಡುತ್ತಿರುವ ಅಗ್ನಿದೇವತೆಗಳು ನಿಮ್ಮ ಮೇಲೆ ಕೋಪಗೊಂಡು, ಶಪಿಸುವುದಿಲ್ಲವೆ? ಹಾಗೆ ಆಗದೆ ಇರಲಿ. ಆದ್ದರಿಂದ ದಯವಿಟ್ಟು ಹುಡುಗನಿಗೆ ವಿದ್ಯಾಭ್ಯಾಸ ಮಾಡಿಸಿರಿ.'' ಸತ್ಯಕಾಮನು ತನ್ನ ಪತ್ನಿಯ ಮಾತುಗಳನ್ನು ಕೇಳಿಸಿಕೊಂಡನು. ಆದರೆ ಏನನ್ನೂ ಮಾತನಾಡಲಿಲ್ಲ. ಊರುಬಿಟ್ಟು ಎಲ್ಲಿಗೋ ಹೊರಟುಹೋದನು.

ಉಪಕೋಸಲನು ಮನಸ್ಸಿನ ದುಃಖದಿಂದ ನರಳಲು ಆರಂಭಿಸಿದನು. ಅವನಿಗೆ ಊಟಮಾಡಲೂ ಮನಸ್ಸಾಗಲಿಲ್ಲ. ಅವನು ಉಪವಾಸ ಮಾಡಲು ಆರಂಭಿಸಿದನು. ಗುರುಪತ್ನಿಯು, ''ಅಪ್ಪಾ, ಉಪಕೋಸಲ, ಏಳು. ಊಟಮಾಡು. ಯಾಕಪ್ಪಾ ಊಟ ಮಾಡದೆ ಇರುವೆ?'' ಎಂದು ಕೇಳಿದಳು. ''ಅಮ್ಮಾ, ನಾನು ಅನೇಕ ಇಚ್ಛೆಗಳನ್ನು ಇಟ್ಟುಕೊಂಡಿದ್ದೇವೆ. ಅವುಗಳು ದೊರೆಯದೆ ಇರುವುದರಿಂದ ಮನಸ್ಸಿನಲ್ಲಿ ಬಹಳ ದುಃಖವನ್ನು ಅನುಭವಿಸುತ್ತಿದ್ದೇನೆ. ಹೀಗಾಗಿ ನನಗೆ ಊಟಮಾಡುವುದಕ್ಕೆ ಮನಸ್ಸಾಗುತ್ತಿಲ್ಲ.'' ಎಂದನು ಉಪಕೋಸಲ.

ಉಪಕೋಸಲನು ಯಾವ ಅಗ್ನಿಗಳನ್ನು ಉಪಾಸನೆ ಮಾಡುತ್ತಿದ್ದನೋ, ಅವು ಹೀಗೆ ಯೋಚನೆ ಮಾಡಿದವು: 'ಬ್ರಹ್ಮಚಾರಿಯು ಮನಸ್ಸಿನಲ್ಲಿ ಬಹಳ ದುಃಖವನ್ನು ಅನುಭವಿಸುತ್ತಿದ್ದನು. ನಮ್ಮನ್ನು ಇಷ್ಟು ವರ್ಷಗಳ ಕಾಲ ನಮ್ಮ ಪರಿಚರ್ಯೆಯನ್ನು ಮಾಡುತ್ತಿದ್ದಾನೆ. ಈಗ ಅವನಿಗೆ ನಾವು ಏನನ್ನಾದರೂ ಉಪಕಾರ ಮಾಡುವ ಸಂದರ್ಭ ಬಂದಿದೆ.' ಈ ಅಗ್ನಿಗಳೆಲ್ಲ ಒಟ್ಟಿಗೆ ಸೇರಿ ಅವನಿಗೆ ಹೇಳಿಕೊಟ್ಟವು: **''ಪ್ರಾಣವೇ ಬ್ರಹ್ಮವು. ಕಂ ಬ್ರಹ್ಮ, ಖಂ ಬ್ರಹ್ಮ.''** (ಸುಖವೇ ಬ್ರಹ್ಮ, ಆಕಾಶವೇ ಬ್ರಹ್ಮ) ಇದರ ಅರ್ಥ, ಬ್ರಹ್ಮವು ಸುಖವಿಶಿಷ್ಟವಾದುದು, ಅಂದರೆ ಬ್ರಹ್ಮವು ಆನಂದರೂಪವಾದುದು. ಈ ಆನಂದವು ಇಂದ್ರಿಯಗಳು ಮತ್ತು ವಿಷಯಗಳ ಸಂಪರ್ಕದಿಂದ ಬರುವ ಆನಂದವಲ್ಲ. ಈ ಆನಂದವು ಆತ್ಮನಲ್ಲಿ ಅಂತರ್ಗತವಾದ ಆನಂದ.

ಇದನ್ನು ಕೇಳಿಸಿಕೊಂಡ ಉಪಕೋಸಲನು ಹೀಗೆ ಹೇಳಿದನು: ''ಪ್ರಾಣವು ಬ್ರಹ್ಮ ಎಂದು ನಾನು ತಿಳಿದುಕೊಂಡೆನು. ಯಾವುದಿದ್ದರೆ ಜೀವನ ಇರುತ್ತದೆಯೋ, ಯಾವುದು ಇಲ್ಲದಿದ್ದರೆ ಜೀವನ ಇರುವುದಿಲ್ಲವೋ, ಅದೇ ಪ್ರಾಣವು. ಆದ್ದರಿಂದ ಇದು ಬ್ರಹ್ಮ

ಎನ್ನುವುದು ಯುಕ್ತವಾಗಿಯೇ ಇದೆ. ಹೀಗಾಗಿ ಪ್ರಾಣವು ಬ್ರಹ್ಮ ಎನ್ನುವುದು ಪ್ರಸಿದ್ಧವಾಗಿಯೇ ಇದೆ. ಆದರೆ, ಕಂ ಬ್ರಹ್ಮ, ಖಂ ಬ್ರಹ್ಮ ಎಂದು ಉಪದೇಶ ಮಾಡಿದರಲ್ಲಾ, ಹಾಗೆಂದರೇನು?'' ಇದಕ್ಕೆ ಅಗ್ನಿಗಳು ಹೀಗೆ ಹೇಳಿದವು: ''ಮಗೂ, ಉಪಕೋಸಲನೇ, ತಿಳಿದುಕೋ. ಯಾವುದು ಕಂ (ಸುಖ), ಅದೇ ಖಂ (ಆಕಾಶ). ಯಾವುದು ಖಂ, ಅದೇ ಕಂ ಇದರರ್ಥ ಹೀಗಿದೆ: ಇಲ್ಲಿ ಸುಖ ವೆಂದರೆ ಬ್ರಹ್ಮಾನಂದ ಎಂದರ್ಥ. ಹಾಗೆಯೇ ಆಕಾಶವೆಂದರೆ ಭೌತಿಕ ಆಕಾಶವಲ್ಲ, ಚೈತನ್ಯರೂಪವಾದ, ಸರ್ವಾಂತರ್ಯಾಮಿ ಯಾದ ಆಕಾಶವೇ ಇಲ್ಲಿ ಹೇಳಿರುವುದು. ಇವೆರಡೂ ಬ್ರಹ್ಮ ರೂಪವೇ ಆಗಿದೆ. ಹೀಗಾಗಿ ಯಾವುದು ಸುಖವೋ ಅದೇ ಆಕಾ ಶವೂ ಆಗಿದೆ. ಇಲ್ಲಿ ಆಕಾಶವೆಂದರೆ ಹೊರಗಿನ ಆಕಾಶವಲ್ಲ, ಹೃದಯಾಕಾಶ. ಅಲ್ಲಿ ಆನಂದದ ಗುಣವಿದೆ. ಏಕೆಂದರೆ ಅಲ್ಲಿ ಬ್ರಹ್ಮಸ್ವರೂಪವೇ ಆಗಿರುವ ಪ್ರತ್ಯಗಾತ್ಮನ ಅನುಸಂಧಾನವಾಗು ತ್ತದೆ. ಹೀಗಾಗಿ ಹೃದಯಗುಹೆಯಲ್ಲಿ ಧ್ಯಾನಮಾಡುವಾಗ ದೊರ ಕುವ ಬ್ರಹ್ಮಾನಂದವನ್ನೇ ಇಲ್ಲಿ ಹೇಳಿರುವುದು.''

ಅನಂತರ, ಗಾರ್ಹಪತ್ಯ ಅಗ್ನಿಯು ಉಪಕೋಸಲನಿಗೆ ಹೀಗೆ ಉಪದೇಶ ಮಾಡಿತು: ''ಮಗೂ, ಪೃಥಿವೀ, ಅಗ್ನಿ, ಅನ್ನ, ಆದಿತ್ಯ – ಇವೆಲ್ಲವೂ ನನ್ನ ನಾಲ್ಕು ದೇಹಗಳು. ಇವುಗಳಲ್ಲಿ ಆದಿತ್ಯನಲ್ಲಿ ಯಾವ ಪುರುಷನು ಇದ್ದಾನೆಯೋ, ಅವನೇ ನಾನು. ನಾನೇ ಆ ಆದಿತ್ಯನಲ್ಲಿರುವ ಪುರುಷನೂ ಆಗಿದ್ದೇನೆ.'' ಅಗ್ನಿಯು ಹೇಳು ತ್ತದೆ: ''ಯಾರು ಈ ಅರಿವನ್ನು ಪಡೆದುಕೊಂಡು, ಈ ಅಗ್ನಿಯನ್ನು ಉಪಾಸನೆ ಮಾಡುತ್ತಾರೆಯೋ, ಅವನ ಎಲ್ಲ ಪಾಪಕೃತ್ಯಗಳನ್ನೂ ನಾಶಗೊಳಿಸಿಕೊಳ್ಳುತ್ತಾನೆ; ಉತ್ತಮ ಲೋಕಗಳನ್ನು ಅವನು ಪಡೆದು ಕೊಳ್ಳುತ್ತಾನೆ; ಹೆಚ್ಚಿನ ಆಯುಸ್ಸನ್ನು ಅವನು ಪಡೆದುಕೊಳ್ಳುತ್ತಾನೆ. ಅಗ್ನಿಗಳಾದ ನಾವು ಈ ಲೋಕದಲ್ಲಿಯೂ, ಪರಲೋಕದಲ್ಲಿಯೂ ಅವನನ್ನು ಕಾಪಾಡುತ್ತೇವೆ.''

ಅನಂತರ ಅನ್ವಾಹಾರ್ಯ ಪಚನಾಗ್ನಿಯು ಉಪಕೋಸಲನಿಗೆ ಉಪದೇಶ ಮಾಡಿತು. ಅದರ ನಾಲ್ಕು ದೇಹಗಳು ಯಾವುದೆಂದರೆ, ಜಲ, ದಿಕ್ಕುಗಳು, ನಕ್ಷತ್ರಗಳು ಮತ್ತು ಚಂದ್ರನು. ಈ ಅಗ್ನಿಯು ಉಪದೇಶ ಮಾಡಿತು: ''ಚಂದ್ರನಲ್ಲಿ ಕಂಡುಬರುವ ಪುರುಷನೇ ನಾನು. ನಾನೇ ಚಂದ್ರನಲ್ಲಿ ಕಂಡುಬರುವ ಪುರುಷನು.''

ಹೀಗೆಯೇ, ಆಹವನೀಯ ಅಗ್ನಿಯು ಕೂಡ ಉಪಕೋಸಲ ನಿಗೆ ಉಪದೇಶಮಾಡಿತು. ''ಪ್ರಾಣ, ಆಕಾಶ, ದ್ಯುಲೋಕ ಮತ್ತು ಮಿಂಚುಗಳೇ ಅವನ ನಾಲ್ಕು ತನುಗಳು (ದೇಹಗಳು).'' ಅದು ಅವನಿಗೆ ಹೇಳಿತು: ''ಮಿಂಚಿನಲ್ಲಿ ಕಾಣಬರುವ ಪುರುಷನೇ ನಾನಾಗಿದ್ದೇನೆ; ನಾನೇ ಈ ಮಿಂಚಿನಲ್ಲಿ ಕಂಡುಬರುವ ಪುರು ಷನು.''

ಹೀಗೆ ಉಪದೇಶ ಮಾಡಿದ ನಂತರ, ಉಪಕೋಸಲನಿಗೆ ಈ ಅಗ್ನಿಗಳು ಹೀಗೆ ಹೇಳಿದವು: ''ಸೋಮ್ಯ, ಉಪಕೋಸಲ. ಈಗ ನಿನಗೆ ಹೇಳಿಕೊಟ್ಟದ್ದು ಅಗ್ನಿವಿದ್ಯೆ. ಹಿಂದೆ ಹೇಳಿದೆವಲ್ಲಾ, ಪ್ರಾಣವೇ ಬ್ರಹ್ಮ; ಕಂ ಬ್ರಹ್ಮ, ಖಂ ಬ್ರಹ್ಮ ಎಂದು ಹಿಂದೆ ಹೇಳಿಕೊಟ್ಟೆವಲ್ಲಾ, ಅದೇ ಆತ್ಮವಿದ್ಯೆ. ಇಷ್ಟರಿಂದ ಈ ವಿದ್ಯೆಯ ಫಲವು ನಿನಗೆ ದೊರ ಕುವುದಿಲ್ಲ. ಈ ವಿದ್ಯೆಯ ಫಲದ ಪ್ರಾಪ್ತಿಬೇಕಾದ ಮಾರ್ಗವನ್ನು ನಿನ್ನ ಆಚಾರ್ಯನಾದ ಸತ್ಯಕಾಮನೇ ಹೇಳಿಕೊಡುತ್ತಾನೆ.'' ಹೀಗೆ ಹೇಳಿ, ಅಗ್ನಿಗಳು ಅಂತರ್ಧಾನ ಹೊಂದಿದವು.

ಅದೇ ಸಮಯಕ್ಕೆ ಆಚಾರ್ಯನು ಮನೆಯ ಒಳಕ್ಕೆ ಬಂದನು. ''ಮಗೂ, ಉಪಕೋಸಲಾ'' ಎಂದು ಕರೆದನು. ''ಭಗವಂತನೇ'' ಎಂದು ಉಪಕೋಸಲನು ಉತ್ತರ ಕೊಟ್ಟನು. ''ಅಪ್ಪಾ, ಬ್ರಹ್ಮ ಜ್ಞಾನಿಯ ಮುಖದಂತೆ ನಿನ್ನ ಮುಖವು ಹೊಳೆಯುತ್ತಿದೆ. ಯಾರಪ್ಪಾ, ನಿನಗೆ ಉಪದೇಶಮಾಡಿದ್ದು?'' ಅದಕ್ಕೆ ಉಪಕೋಸ ಲನು ನೇರವಾಗಿ ಉತ್ತರ ನೀಡಲಿಲ್ಲ. ''ಈ ಅಗ್ನಿಗಳೇ ಇರಬೇಕು. ಏಕೆಂದರೆ ನಿಮ್ಮನ್ನು ನೋಡಿದ ತಕ್ಷಣ ಅವುಗಳು ನಡುಗುತ್ತಿವೆ'' ಎಂದುಬಿಟ್ಟನು. ಆಚಾರ್ಯನಾದ ಸತ್ಯಕಾಮನಿಗೆ ಅರ್ಥವಾಯಿತು. ''ಅಗ್ನಿಗಳು ಏನನ್ನು ತಾನೇ ಉಪದೇಶಮಾಡಿದವಪ್ಪಾ?'' ಎಂದು ಅವನು ಕೇಳಿದನು. ಉಪಕೋಸಲನು ಅವುಗಳು ಹೇಳಿಕೊಟ್ಟಿರುವು ದನ್ನು ಪುನರುಚ್ಚರಿಸಿದನು. ಇದನ್ನು ಆಲಿಸಿಕೊಂಡ ಸತ್ಯಕಾಮನು ಹೀಗೆ ಹೇಳಿದನು: ''ಅಪ್ಪಾ, ಉಪಕೋಸಲಾ, ಅಗ್ನಿಗಳು ಹೋಗಿ ಸೇರಬಹುದಾದ ಹಲವಾರು ಲೋಕಗಳ ಬಗ್ಗೆ ನಿನಗೆ ತಿಳಿಸಿ ಕೊಟ್ಟಿವೆಯೇ ಹೊರತು, ಇಲ್ಲಿಯೇ ಸಾಕ್ಷಾತ್ಕಾರ ಮಾಡಿಕೊಳ್ಳ ಬಹುದಾದ ಬ್ರಹ್ಮಸ್ವರೂಪದ ಬಗ್ಗೆ ಪೂರ್ಣವಾಗಿ ನಿನಗೆ ಉಪ ದೇಶವನ್ನು ಇನ್ನೂ ಮಾಡಿಲ್ಲ.'' ❁

## ಸ್ವಾಮಿ ಬ್ರಹ್ಮಾನಂದರ ಮಹಿಮೆ

ಒಂದು ಸಲ ಬೇಲೂರು ಮಠದಲ್ಲಿ ಸ್ವಾಮಿ ವಿವೇಕಾ ನಂದರು ಹಾಗೂ ಸ್ವಾಮಿ ಬ್ರಹ್ಮಾನಂದರು ಒಟ್ಟಿಗೆ ಕುಳಿತಿ ದ್ದರು. ಸ್ವಾಮೀಜಿ ಮಠ ನಿರ್ಮಾಣ ಹೇಗೆ ಮಾಡುವುದು ಎಂಬುದನ್ನು ಕುರಿತು ಚರ್ಚಿಸುತ್ತಿದ್ದರು. ಇದ್ದಕ್ಕಿದ್ದಂತೆ ಬ್ರಹ್ಮಾನಂದರು ಈ ವಿಷಯ ಕುರಿತಂತೆ ಏನೋ ಹೇಳಿ ದರು. ಅದನ್ನು ಕೇಳಿದ ಕೂಡಲೇ ಸ್ವಾಮೀಜಿ ಒಂದು ಪುಸ್ತಕದಲ್ಲಿ ಆ ಮಾತನ್ನು ಬರೆದಿಟ್ಟರು. ಆಗ ಅದನ್ನು ಕಂಡ ಬ್ರಹ್ಮಾನಂದರು, ''ಸ್ವಾಮೀಜಿ, ಅವು ಸುಮ್ಮನೆ ನನ್ನ ಬಾಯಿಯಿಂದ ಬಂದ ಪದಗಳಷ್ಟೆ. ಅದಕ್ಕೆ ಅಷ್ಟು ಗಮನ ಕೊಡಬೇಡಿ'' ಎಂದರು. ಸ್ವಾಮೀಜಿ ಅದನ್ನು ಕಿವಿಗೆ ಹಾಕಿ ಕೊಳ್ಳಲಿಲ್ಲ. ಬ್ರಹ್ಮಾನಂದರ ಬಾಯಿಯಿಂದ ಏನೇ ಹೊರ ಬಂದರೂ ಅದು ಶ್ರೀರಾಮಕೃಷ್ಣರು ಮಾತನಾಡುತ್ತಿರು ವುದೇ ಎಂಬ ನಂಬಿಕೆ ಸ್ವಾಮೀಜಿಯವರದಾಗಿತ್ತು !

*— ಸ್ವಾಮಿ ಪ್ರಭವಾನಂದ, 'My Master Swami Brahmananda' ಗ್ರಂಥದಲ್ಲಿ*